ದಿಃ 04.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಸ್ ವಕೀಲರಿಂದ ,**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ರಾಘುವೇಂದ್ರ. ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿಃ 17.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಹೆಚ್ ಆರ್.ಎಂ ವಕೀಲರಿಂದ ,**

1. ನನ್ನ ಮೇಲ್ಮನವಿ ಮತ್ತು ಮುಖ್ಯವಿಚಾರಣೆಂಗೆ ಮಾಹಿಯನ್ನು ನಾನೇ ನೀಡಿರುತ್ತೇನೆ. ಅವವುಗಳಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇದೆ. ಓಎಸ್ 376/2018 ಯಾವಾಗ ತೀರ್ಪು ಪ್ರಕಟವಾಗಿತ್ತು ಎಂದು ನನಗೆ ಗೊತ್ತು. ಓಎಸ್ 376/2018 ತೀರ್ಪಾದ ದಿವಸ ನಾನು ಮತ್ತು ಅಣ್ಣಪ್ಪ ಹಾಜರಿದ್ದೇವು ಎಂದರೆ ಸರಿ. ತೀರ್ಪಿನ ಪ್ರತಿಯನ್ನು ನ್ಯಾಯಾಲಯಕ್ಕೆ ಅರ್ಜಿಯನ್ನು ಯಾವಾಗ ನಿಡೀದ್ದೇವು ಎಂದು ಹೇಳಲು ಈಗ ಹೇಳಲು ಆಗವುದಿಲ್ಲ. ನ್ಯಾಯ್ಯಾಲಯದಿಂದ ತೀರ್ಪಿನ ನಕಲು ಪಡೆದ ದಿನಾಂಕ ಹೇಳಲು ಆಗುವುದಿಲ್ಲ. ಸುಮಾರು 09/10 ತಿಂಗಳ ತಡವಾಗಿ ನಾನು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ. ಓಎಸ್ 376/2018 ದಾವೆ ಸಲ್ಲಿಸಿದಾಗಿನಿಂದಲೂ ನಾನು ಮತ್ತು ಪ್ರತಿವಾದಿಗಳು ಮಾತನಾಡಿರುವುದಿಲ್ಲ ಎಂದರೆ ಸರಿ. ಯಾವ ದಿನಾಂಕ ಮತ್ತು ವರ್ಷ ನಾವು ಪ್ರತಿವಾದಿಗಳ ಜೊತೆಯಲ್ಲಿ ಮಾತುಕತೆ ಮಾಡಿರುತ್ತೇವೆ ಎಂದು ಹೇಳಲು ನೆನಪಿರುವುದಿಲ್ಲ. ನಮ್ಮ ಊರಿನ ದೇವಸ್ಥಾನದ

ಮುಂಭಾಗ ಮಾತುಕತೆಯಾಗಿರುತ್ತದೆ. ಮಾತುಕತೆಯ ಸಂಬಂಧ ಯಾವುದೇ ಮಾತುಕತೆಯಾಗಿರುವುದಿಲ್ಲ. ಆ ಸಂದರ್ಭ ದಲ್ಲಿ ನಮ್ಮ ಊರಿನ ನಾಲ್ಕು ಜನರು ಇದ್ದರು. ಮಾತುಕತೆಗೆ ಸಂಬಂದಪಟ್ಟಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಓಎಸ್ 374/2018 ದಾವೆ ಸಲ್ಲಿಸಿದಾಗಿನಿಂದ ತೀರ್ಪಾಗುವ ತನಕ ನಾವು ರಾಜೀ ಸಂದಾನಕ್ಕಾಗಿ ಮಾತುಕತೆ ನಡೆಸಿಲ್ಲ ಎಂದರೆ ಸರಿ. ಅಣ್ಣಪ್ಪ ನನ್ನ ತಮ್ಮ. ನಾನು ಮತ್ತು ನನ್ನ ತಮ್ಮ ತೋಟದ ಕೆಲಸ ಮಾಡಿಕೊಂಡು ಆರೋಗ್ಯವಾಗಿದ್ದೇವೆ ಎಂದರೆ ಸರಿ. ವಕೀಲರು ಸಹ ನಮ್ಮ ಊರಿನವರೇ. ಕಾಲವಮಿತಿಯ ಒಳಗೆ ಆಪೀಲನ್ನು ಸಲ್ಲಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಸೂಕ್ತ ವಾದ ಕಾರಣವನ್ನು ನಾನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸೂಕ್ತವಾದ ಕಾರಣವನ್ನು ನೀಡಿದ ಇರುವ ಕಾರಣ ನಾನು ಸಲ್ಲಿಸಿರುವ ಮೇಲ್ಮನವಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ